ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-7 Issue-1, July-August 2025, Pp. 86-93**
**©*IIMRD*, Mysuru**

IIMRD JOURNALS

**www.iimrd.com**

# ಖಾದಿ ಅಭಿವೃದ್ಧಿಯಲ್ಲಿ ಖಾದಿ ಕೇಂದ್ರಗಳ ಪಾತ್ರ

**ಡಾ. ಶಿವಕುಮಾರ್ ಎ**
ಅತಿಥಿ ಉಪನ್ಯಾಸಕರು, ಇತಿಹಾಸ ವಿಭಾಗ, ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ, ಬೆಂಗಳೂರು

**ಸಾರಾಂಶ: (Abstract)**

*ಗಾಂಧೀಜಿಯವರು ರಾಷ್ಟ್ರ ವಿಮೋಚನೆಗಾಗಿ ಹೋರಾಟದ ಜೊತೆ ಜೊತೆಯಲ್ಲೆ ರಚನಾತ್ಮಕ ಕಾರ್ಯಕ್ರಮಗಳನ್ನ ಪ್ರಚಾರ ಪಡಿಸಿದರು. ಇವು ರಾಷ್ಟ್ರ ನಿರ್ಮಾಣದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಸಹಕಾರಿಯಾದ ಅಂಶಗಳಾಗಿವೆ. ಇವರು ಸ್ವದೇಶಿ, ಖಾದಿ, ಹರಿಜನೋದ್ಧಾರ, ಗೋಸಂರಕ್ಷಣೆ , ರಾಷ್ಟ್ರ ಭಾಷೆ, ಕೋಮು ಸೌಹಾರ್ದತೆ, ಮಹಿಳೆಯರ ಏಳಿಗೆ ಇನ್ನಿತರ ಹದಿನೆಂಟು ಅಂಶಗಳನ್ನ ರೂಪಿಸಿದ್ದರು. ಗಾಂಧೀಜಿಯವರು "ಶಾಂತಿಯ ತತ್ವಗಳನ್ನು ಒಳಗೊಂಡ ಈ ಕ್ರಾಂತಿಯ ಕಾರ್ಯಕ್ರಮಗಳ ಸರ್ವವ್ಯಾಪ್ತಿಯುಳ್ಳ ರಾಷ್ಟ್ರೀಯ ಯೋಜನೆಗಳಾಗಿವೆ. ಇವುಗಳಲ್ಲಿ ಕೆಲವು ವಿಶಿಷ್ಟ ಸಮಸ್ಯೆಗಳನ್ನು ಬಗೆಹರಿಸಿದರೆ. ಖಾದಿ ಮತ್ತು ಮೂಲ ಶಿಕ್ಷಣ ಮಾನವ ಕೋಟಿಗೆ ಯೋಗ್ಯವಾಗಿವೆ" ಎಂದು ಅಭಿಪ್ರಾಯ ಪಟ್ಟಿದ್ದಾರೆ. ಈ ವ್ಯಾಖ್ಯಾನವನ್ನು ಗಮನಿಸಿದರೆ ರಚನಾತ್ಮಕ ಕಾರ್ಯಕ್ರಮಗಳ ಮಹತ್ವ ಅರ್ಥವಾಗುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಲೇಖನದಲ್ಲಿ ಖಾದಿ ಅಭಿವೃದ್ಧಿಯಲ್ಲಿ ಖಾದಿ ಕೇಂದ್ರಗಳ ಪಾತ್ರವನ್ನು ಕುರಿತು ಚರ್ಚಿಸಲಾಗಿದೆ.*

**ಮುಖ್ಯಪದಗಳು (Keywords):** *ನೇಯ್ಗೆ, ಸ್ವದೇಶಿ, ಚರಕ, ಬಟ್ಟೆ ಉತ್ಪಾದನೆ, ಖಾದಿ ಅಭಿವೃದ್ಧಿ, ಖಾದಿ ಕೇಂದ್ರಗಳು.*

## ಪೀಠಿಕೆ

ಕರ್ನಾಟಕದಲ್ಲಿ ಗಾಂಧೀಜಿಯವರ ಆಗಮನದ ನಂತರ ಸ್ವದೇಶಿ ವಸ್ತುಗಳ ಪ್ರಚಾರ ಬಿರುಸುನಿಂದ ಸಾಗಿತ್ತು. ಸ್ವದೇಶಿ ಮತ್ತು ಖಾದಿ ಆಂದೋಲನದ ಪರಿಣಾಮವಾಗಿ ವೀದೇಶಿ ವಸ್ತುಗಳನ್ನು ಮತ್ತು ವಸ್ತ್ರಗಳನ್ನು ಬಹಿರಂಗವಾಗಿ ಸುಡುವಂತಾಯಿತು. ಖಾದಿ ಉತ್ಪಾದನಾ ಕೇಂದ್ರಗಳು, ಖಾದಿ ಮಾರಾಟ ಕೇಂದ್ರಗಳು, ಕರ್ನಾಟಕದಾದ್ಯಂತಹ ಪ್ರಾರಂಭಗೊಂಡು ಖಾದಿ ಪ್ರಚಾರದಲ್ಲಿ ತೊಡಗಿದವು

## ಕುಮರಿ (ಹುದಲಿ) ಖಾದಿ ಕೇಂದ್ರ

ಗಾಂಧೀಜಿಯವರು ಗುಜರಾತಿನ ಸಬರಮತಿಯಲ್ಲಿ ಆಶ್ರಮವನ್ನು ಸ್ಥಾಪಿಸಿದ ನಂತರ ಈ ಆಶ್ರಮದ ಮಾದರಿಯಲ್ಲಿಯೇ ದೇಶದ ವಿವಿಧ ಭಾಗಗಳಲ್ಲಿ ಆಶ್ರಮಗಳು ಸ್ಥಾಪನೆಯಾದವು [1] ಆ ಸಂದರ್ಭದಲ್ಲಿ

*Please cite this article as:* ಶಿವಕುಮಾರ್, ಎ. (2025). ಖಾದಿ ಅಭಿವೃದ್ಧಿಯಲ್ಲಿ ಖಾದಿ ಕೇಂದ್ರಗಳ ಪಾತ್ರ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(1). ಪು.ಸಂ.* 86–93

ಕರ್ನಾಟಕದಲ್ಲಿ ಗಂಗಾಧರರಾವ್ ದೇಶಪಾಂಡೆಯವರ ನಾಯಕತ್ವದಲ್ಲಿ ಹುದಲಿಯಲ್ಲಿ ಕುಮರಿ ಆಶ್ರಮ ಸಹ ಸ್ಥಾಪನೆಯಾಯಿತು.

ಮಹಾತ್ಮ ಗಾಂಧೀಜಿಯವರಿಂದ ಪ್ರಭಾವಿತರಾದಂತಹ ನಾಯಕರುಗಳು ಈ ಆಶ್ರಮಗಳನ್ನು ಆ ಆಶ್ರಮಗಳ ಮೂಲಕ ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮಗಳನ್ನು ಕೈಗೊಂಡರು. ಹೀಗಾಗಿ ಅದೇ ಮಾದರಿಯನ್ನು ಅನುಸರಿಸಿದ ಗಂಗಾಧರರಾವ್ ದೇಶಪಾಂಡೆಯವರು ಕರ್ನಾಟಕದ ಬೆಳಗಾವಿ ಜಿಲ್ಲೆಯ ಹುದಲಿಯಲ್ಲಿ 1923ರಲ್ಲಿ ಆಶ್ರಮವನ್ನು ಸ್ವಂತ ಖರ್ಚಿನಿಂದ ತಮ್ಮ ಜಮೀನಿನಲ್ಲಿ ಸ್ಥಾಪಿಸಿದರು. ಗಂಗಾಧರರಾಯರು ಶ್ರೀಮಂತ ಮನೆತನದವರಾಗಿದ್ದರು. ಕುಂದರನಾಡಿನ ಸುಮಾರು ಹಳ್ಳಿಗಳಲ್ಲಿ ಅರ್ಧದಷ್ಟು ಭೂಮಿ ಇವರದಾಗಿತ್ತು. ಈ ಭಾಗದಲ್ಲಿ ಇವರು ಖಾದಿ ಮತ್ತು ಗ್ರಾಮೋದ್ಯೋಗಗಳ ಅಭಿವೃದ್ಧಿಗೆ ಶ್ರಮಿಸಿದರು.

ಹುದಲಿಯು 1925 ರಿಂದ ಖಾದಿ ಉತ್ಪಾದನೆಯ ಕಾರ್ಯಾರಂಭ ಮಾಡಿತು. ಗಂಗಾಧರರಾವ್ ದೇಶಪಾಂಡೆಯವರು ಇದರ ಜವಾಬ್ದಾರಿಯನ್ನು ಹೊತ್ತು ಮುನ್ನಡೆಸಿದರು. ಈ ಹುದಲಿ ಆಶ್ರಮವು ಖಾದಿ ಪ್ರಚಾರದ ಜೊತೆಗೆ ಸತ್ಯಾಗ್ರಹಿಗಳನ್ನು ತಯಾರು ಮಾಡುವ ಕೇಂದ್ರವಾಯಿತು. ಕರ್ನಾಟಕ ಮತ್ತು ಮಹಾರಾಷ್ಟ್ರದ ಸತ್ಯಾಗ್ರಹಿಗಳು ಹುದಲಿಗೆ ಬಂದು ಖಾದಿ ಗ್ರಾಮೋದ್ಯೋಗ ಹಾಗೂ ಇತರೆ ಚಟುವಟಿಕೆಗಳ ಬಗ್ಗೆ ತರಬೇತಿಯನ್ನು ಪಡೆದುಕೊಳ್ಳುತ್ತಿದ್ದರು. ಗಂಗಾಧರರಾಯರು ಕುಂದರನಾಡಿನ ಹೆಣ್ಣುಮಕ್ಕಳಿಗೆ ಅವರ ಬಿಡುವಿನ ವೇಳೆಯಲ್ಲಿ ಬಂದು ಆಶ್ರಮದಲ್ಲಿ ಖಾದಿ ಕೆಲಸ ಮಾಡಬೇಕೆಂದು ಕೇಳಿಕೊಂಡರು. 'ರಾಟಿ ಮೇಟಿಗಳೇ ರಾಷ್ಟ್ರದ ಉದ್ಧಾರದ ಸಂಕೇತ' ಎಂದು ಜನರನ್ನು ನೂಲುವ ಕಾರ್ಯದಲ್ಲಿ ತೊಡಗಿಸಿದರು. ಶ್ರೀಯುತರ ಆಹ್ವಾನವನ್ನು ಸ್ವೀಕರಿಸಿದ ಅಲ್ಲಿನ ಹೆಣ್ಣು ಮಕ್ಕಳು ಮತ್ತು ನೇಕಾರರು ಖಾದಿ ಉತ್ಪಾದನೆ ಮತ್ತು ನೇಯ್ಗೆ ಕೆಲಸದಲ್ಲಿ ತೊಡಗಿದರು[2].

ಕರ್ನಾಟಕದಿಂದ 16 ಜನ ಸತ್ಯಾಗ್ರಹಿಗಳು ಜಮ್ನಾಲಾಲ್ ಖಾದಿ ವಿದ್ಯಾಲಯದ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಅದರಲ್ಲಿ ಸೋಮಲಿಂಗಪ್ಪ ಅಪ್ಪಣ್ಣ ಮಳಗಲಿಯವರೂ ಸಹ ಒಬ್ಬರಾಗಿದ್ದು, ಇಲ್ಲಿ ನೂಲುವ ತರಬೇತಿಯನ್ನು ಪಡೆದುಕೊಂಡು ಬಂದು ಖಾದಿ ನೂಲುವ ಕಾರ್ಯದಲ್ಲಿ ತೊಡಗಿದರು. ಬಿಜಾಪುರದ ನೀಲಕಂಠಯ್ಯ ಗಣಾಚಾರಿಯವರು ಹದಿನೆಂಟು ಹಳ್ಳಿಗಳಲ್ಲಿ ನೇಯ್ಗೆ ಕಾರ್ಯ ಪ್ರಾರಂಭಿಸಿದರು. ಅವರು ಸ್ವತಃ ತಾವೇ ನೇಯ್ದು ಬಟ್ಟೆಯನ್ನು ಧರಿಸುತ್ತಿದ್ದರು. ಈ ಕೇಂದ್ರಕ್ಕೆ ಮೂಲ ಕಚ್ಚಾವಸ್ತುಗಳು ಜಿಲ್ಲೆಯ ಸುಲದಾಳ, ಅಕ್ಕತಂಗೇರಹಾಳ, ಮದವಾಲ, ಉರಬಿನಹಟ್ಟಿ ಮತ್ತು ಪಾಚ್ಚಾಪುರ ಮುಂತಾದ ಗ್ರಾಮಗಳಲ್ಲಿನ ನೂತನೂಲು, ಹುದಲಿ ಆಶ್ರಮದ ನೇಯ್ಗೆ ಕೇಂದ್ರಕ್ಕೆ ಪೂರೈಕೆಯಾಗುತ್ತಿರುತ್ತಿತ್ತು.

1935ರವರೆಗೆ ಹುದಲಿ ಆಶ್ರಮವನ್ನು ಸರ್ಕಾರ ವಶಪಡಿಸಿಕೊಂಡಿತ್ತು. ಆ ವೇಳೆಯಲ್ಲಿ ಖಾದಿ ಕಾರ್ಯವು ಸ್ಥಗಿತಗೊಂಡಿತ್ತು. ಈ ವೇಳೆಯಲ್ಲಿ ಬಿಡುಗಡೆಯಾದ ಸತ್ಯಾಗ್ರಹಿಗಳು ಹುದಲಿಯಲ್ಲಿ ಖಾದಿ ಕಾರ್ಯವನ್ನು ಪುನಃ ಪ್ರಾರಂಭಿಸಬೇಕೆಂದು ತೀರ್ಮಾನಿಸಿದರು. ಪುಂಡಲೀಕಜಿ ಕಾತಗಡೆ, ರಾಮಚಂದ್ರ ವಡವಿ, ಗಂಗಪ್ಪ ಯಮಕನಮರಡಿ ಹುದಲಿಯಲ್ಲಿ, ದಾದಾಕಾಳೆಯವರು ಸುಲದಾಳದಲ್ಲಿ, ವಾಮನರಾವ್ ಬಿದರಿಯವರು ಅಕ್ಕ ತಂಗೇರಹಾಳದಲ್ಲಿ, ಅಣ್ಣುಗುರೂಜಿ ಪಾಶ್ಚಾಪುರದಲ್ಲಿ ಹೀಗೆ ಪ್ರತಿಯೊಬ್ಬರೂ

ಒಂದೊಂದು ಭಾಗದಲ್ಲಿ ಖಾದಿ ಕಾರ್ಯವನ್ನು ನಿರ್ವಹಿಸುತ್ತಾ ಕುಮರಿಯ ಹುದಲಿ ಆಶ್ರಮದ ಕಾರ್ಯಚಟುವಟಿಕೆಗಳನ್ನು ಮುಂದುವರೆಸಿದರು. ನಂತರ ಕರ್ನಾಟಕದೊಳಗೆ ಖಾದಿ ಕೆಲಸ ನಡೆಸುವ ಸಂಘಗಳು ಚರಕ ಸಂಘದ ಪರವಾಗಿ ಕೆಲಸ ಮಾಡುತ್ತಿದ್ದರಿಂದ ಹುದಲಿ ಭಾಗದ ಖಾದಿ ಕೆಲಸವೂ ಸಹ ಚರಕ ಸಂಘಕ್ಕೆ ಒಳಪಟ್ಟಿದ್ದು, ಹುದಲಿ ಉತ್ಪಾದನೆಯನ್ನು ಚರಕ ಸಂಘದ ವತಿಯಿಂದ ಆ ಭಾಗದಲ್ಲಿ ತಯಾರಾದಂತಹ ಖಾದಿ ಬೆಳಗಾವಿಯಲ್ಲಿದ್ದ ಖಾದಿ ಅಂಗಡಿಗಳಿಗೆ ಕಳುಹಿಸಲಾಗುತ್ತಿತ್ತು. ನಂತರದ ದಿನಗಳಲ್ಲಿ ಗಂಗಪ್ಪ ಯಮಕನಮರಡಿ, ಅಣ್ಣಾಬಸಪ್ಪಮರಲಿಂಗಣ್ಣನವರ, ತಿಪ್ಪಣ್ಣಬೆಟಗೇರಿ ಇವರುಗಳು ಚರಕ ಸಂಘದ ಕಾರ್ಯಕರ್ತರಾಗಿ ಕೆಲಸ ನಿರ್ವಹಿಸಿದರು.

1936ರಲ್ಲಿ ಹುದಲಿಯಲ್ಲಿ 'ತರುಣರ ಸಂಘ' ಸ್ಥಾಪಿಸಲ್ಪಟ್ಟಿತು. ಈ ತರುಣ ಸಂಘದ ಸದಸ್ಯರು ಖಾದಿಧಾರಿಗಳಾಗಿದ್ದರು. ತರುಣ ಸಂಘದ ಸದಸ್ಯರಾಗಿದ್ದಂತಹ ಬೀಮಪ್ಪ ನಿಂಗಪ್ಪ ಭೂಶಿ, ಬೀ.ಚ. ಯಲಿಗಾರ್, ಕೆಂಚನಗೌಡ ಪಾಟೀಲ, ತಿ.ಯ. ಬೆಟಗೇರಿ ಇವರುಗಳು ಪ್ರತಿದಿನ ಹಂಜಿ ತಯಾರಿಕೆ ಖಾದಿ ಉತ್ಪಾದನೆ ಮಾಡುತ್ತಿದ್ದು ಈ ಕೇಂದ್ರದಲ್ಲಿ ಖಾದಿ ಉತ್ಪಾದನೆಯನ್ನು ದ್ವಿಗುಣಗೊಳಿಸಿದರು.

ಹುದಲಿಯಲ್ಲಿ 1937 ಏಪ್ರಿಲ್ 16 ರಿಂದ ಒಂದು ವಾರದ ಕಾಲ 'ಅಖಿಲ ಭಾರತ ಖಾದಿ ಸೇವಾ ಸಮ್ಮೇಳನ' ಜರುಗಿತು. ಈ ಸಮ್ಮೇಳನವನ್ನು ಗಂಗಾಧರರಾಯರು ಆಶ್ರಮದ ಹಿರಿಯ ಕಾರ್ಯಕರ್ತರಾಗಿದ್ದಂತಹ ಶ್ರೀ ಪುಂಡಲೀಕಜಿ, ಶ್ರೀ ವಡವಿ, ಅಣ್ಣುಗುರೂಜಿ ಮತ್ತು ವಾಮನರಾವ್ ಬಿದರಿಯವರ ಸಹಕಾರದೊಂದಿಗೆ ಸಂಘಟಿಸಿದರು. ಗಾಂಧೀಜಿಯವರು ಈ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ತರುಣ ಸಂಘದ ಮುಂಚೂಣಿ ಕಾರ್ಯಕರ್ತಗಳಾದಂತಹ ಭೀಮಪ್ಪ ನಿಂಗಪ್ಪ ಬೋಶಿ, . ಬೀ.ಚ. ಯಲಿಗಾರ ಇವರು ಏಳು ದಿವಸಗಳ ಕಾಲ ಗಾಂಧೀಜಿಯವರ ಜೊತೆಗಿದ್ದು, ಅವರಿಗೆ ಬೇಕಾದಂತಹ ಹಂಜಿಯನ್ನು ತಯಾರಿಸಿಕೊಡುತ್ತಿದ್ದರು. ಖಾದಿಯ ಪ್ರದರ್ಶನವನ್ನೂ ಸಹ ಈ ಸಂದರ್ಭದಲ್ಲಿ ಏರ್ಪಡಿಸಲಾಗಿತ್ತು[3].

ಗಾಂಧೀಜಿಯವರನ್ನು ನೋಡಲು ಬಂದಂತಹವರೆಲ್ಲ ಖಾದಿಯನ್ನು ಕೊಳ್ಳುತ್ತಿದ್ದರಿಂದ ಮತ್ತು ಖಾದಿ ಧಾರಿಗಳಾಗಲು ಪ್ರತಿಜ್ಞೆ ತೊಡುತ್ತಿದ್ದರಿಂದ ಹೆಚ್ಚಿನ ಮಟ್ಟದಲ್ಲಿ ಈ ಪ್ರದರ್ಶನದಲ್ಲಿ ಖಾದಿಯು ಮಾರಾಟವಾಯಿತು. ಮುಂಬಯಿ ಪ್ರಾಂತ್ಯದಲ್ಲಿ ಬಿ.ಜಿ. ಕೇರ್ ನಾಯಕತ್ವದಲ್ಲಿ ಸರ್ಕಾರ ರಚನೆಯಾಗಿ ಈ ಸರ್ಕಾರ ಶಿಕ್ಷಣಕ್ಕೆ ಪ್ರಮುಖ್ಯತೆ ನೀಡಿ, ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ನೇಯ್ಗೆ ತರಬೇತಿಗೆ ಆದ್ಯತೆ ನೀಡಿತು. ಇದರಿಂದ ಮತ್ತಷ್ಟು ಖಾದಿ ಪ್ರಚಾರಗೊಂಡಿತು.

1936ರಲ್ಲಿ ಗಂಗಾಧರ ರಾಯರು ತಮ್ಮ ಸ್ವಂತ ಪರಿಶ್ರಮದಿಂದಲೇ ಈ ಭಾಗದ ಜನರಲ್ಲಿ ಖಾದಿ ಕಾರ್ಯದ ಜೊತೆಗೆ ರಾಷ್ಟ್ರ ಭಕ್ತಿಯನ್ನು ಜಾಗೃತಗೊಳಿಸಿದರು. ಈ ಸಂಸ್ಥೆಯು 1936ರಲ್ಲಿ ಅಖಿಲ ಭಾರತ ಚರಕ ಸಂಘದ ಮೇಲ್ವಿಚಾರಣೆಯಲ್ಲಿ ತನ್ನ ಕಾರ್ಯವನ್ನು ಮುಂದುವರೆಸಿತು. ಗಂಗಾಧರರಾಯರು ಕರ್ನಾಟಕ ಚರಕ ಸಂಘದ ಅಧ್ಯಕ್ಷರಾಗಿ 1937 ರಿಂದ 1944ರ ತನಕ ಹುದಲಿಯ ಆಶ್ರಮವನ್ನು 'ಚರಕ ಸಂಘದ ಆಶ್ರಯದಲ್ಲಿ' ಮುನ್ನಡೆಸಿದರು. 1941ರಲ್ಲಿ ಹುದಲಿಯಲ್ಲಿಯೇ 'ಜಮನ್ಲಾಲ್ ಖಾದಿ ವಿದ್ಯಾಲಯ'ವು ಪ್ರಾರಂಭವಾಯಿತು. ಖಾದಿಯ ಕೆಲಸವು ಚರಕ ಸಂಘದಿಂದ ಪ್ರಗತಿಪರವಾಗಿ ನಡೆಯುತ್ತಿರುವಾಗಲೇ

ವಾರ್ಧಾ ಆಶ್ರಮದ ಮಾದರಿಯಲ್ಲಿಯೇ ಹುದಲಿಯಲ್ಲಿಯೂ ಸಹ ವಿದ್ಯಾಲಯವನ್ನು ಪ್ರಾರಂಭಿಸಿ, ಈ ಭಾಗದ ಸತ್ಯಾಗ್ರಹಿಗಳಿಗೆ ಖಾದಿಯನ್ನು ತಯಾರಿಸುವ ಬಗ್ಗೆ ಹಾಗೂ ಬೌದ್ಧಿಕವಾಗಿ ಗಾಂಧೀ ತತ್ವಜ್ಞಾನ ಮತ್ತು ಖಾದಿ ತತ್ವಜ್ಞಾನವನ್ನು ಕಲಿಸಿಕೊಡುತ್ತಿತ್ತು. ಪ್ರಾರಂಭದಲ್ಲಿ ಈ ವಿದ್ಯಾಲಯಕ್ಕೆ ದುರ್ಯೋದನಸಿಂಗ್ ಎಂಬುವವರು ಶಿಕ್ಷಕರಾಗಿದ್ದರು. ಪ್ರಾರಂಭದಲ್ಲಿ ಹದಿನಾಲ್ಕು ಜನರು ಶಿಕ್ಷಣ ಪಡೆಯಲು ಸೇರಿಕೊಂಡರು[4].

ಈ ವಿದ್ಯಾಲಯ ಪ್ರಾರಂಭವಾದ ಒಂದು ವರ್ಷದ ನಂತರ ಸೇವಾ ಗ್ರಾಮದಿಂದ ದೇವದರಭಾಯಿ ಕಿಶೋರಲಾಲಜಿಯವರು ಹುದಲಿಯ ಜಮನ್ಲಾಲ್ ಖಾದಿ ವಿದ್ಯಾಲಯಕ್ಕೆ ಬಂದು ಇವರನ್ನು ಪರೀಕ್ಷೆಗೆ ಒಳಪಡಿಸಿ ಕತಾಯಿ ಕಾರ್ಯಕರ್ತರೆಂದು ಘೋಷಿಸಿದರು. ನಂತರ ಎರಡನೇ ತಂಡದ ತರಬೇತಿ ಕಾರ್ಯವು 1942ರ ಜೂನ್‌ನಲ್ಲಿ ಶ್ರೀ ವಾಸುದೇವಾಗೋಸಾಲಿಯವರ ಮಾರ್ಗದರ್ಶನದಲ್ಲಿ ನಡೆಯಿತು. ನಂತರದ ದಿನಗಳಲ್ಲಿ ಈ ಆಶ್ರಮದ ಸತ್ಯಾಗ್ರಹ ಕಾರ್ಯಕರ್ತರುಗಳನ್ನೆಲ್ಲ ಚಲೇಜಾವ್ ಚಳುವಳಿಯ ಕಾರಣದಿಂದ ಬಂಧನಕ್ಕೊಳಪಡಿಸಿದಾಗ ಈ ವಿದ್ಯಾಲಯದ ಕಾರ್ಯಚಟುವಟಿಕೆಗಳು 1942ರಲ್ಲಿ ಸ್ಥಗಿತಗೊಂಡು, ಪುನಃ 1944ರಲ್ಲಿ ಪ್ರಾರಂಭವಾದವು. ಈ ಸಂದರ್ಭದಲ್ಲಿ ಕಾರ್ಯಕರ್ತರುಗಳೆಲ್ಲ ಜೈಲಿನಿಂದ ಹೊರಬಂದ ಮೇಲೆ ಪುನಃ ಚರಕ ಸಂಘದ ಪರವಾಗಿ ಖಾದಿ ಕಾರ್ಯವು ಆರಂಭವಾಯಿತು.

ಕಾರ್ಯಕರ್ತರುಗಳನ್ನೆಲ್ಲ ಚಲೇಜಾವ್ ಚಳುವಳಿಯ ಕಾರಣದಿಂದ ಬಂಧನಕ್ಕೊಳಪಡಿಸಿದಾಗ ಈ ವಿದ್ಯಾಲಯದ ಕಾರ್ಯಚಟುವಟಿಕೆಗಳು 1942ರಲ್ಲಿ ಸ್ಥಗಿತಗೊಂಡು, ಪುನಃ 1944ರಲ್ಲಿ ಪ್ರಾರಂಭವಾದವು. ಈ ಸಂದರ್ಭದಲ್ಲಿ ಕಾರ್ಯಕರ್ತರುಗಳೆಲ್ಲ ಜೈಲಿನಿಂದ ಹೊರಬಂದ ಮೇಲೆ ಪುನಃ ಚರಕ ಸಂಘದ ಪರವಾಗಿ ಖಾದಿ ಕಾರ್ಯವು ಆರಂಭವಾಯಿತು.

ಈ ವಿದ್ಯಾಲಯವು ಉತ್ತಮ ಖಾದಿ ಕಾರ್ಯಕರ್ತರನ್ನು ನಿರ್ಮಾಣ ಮಾಡುವ ಜವಾಬ್ದಾರಿಯನ್ನು ಹೊಂದಿತ್ತು. ಗಂಗಾಧರರಾವ್ ದೇಶಪಾಂಡೆ, ಪುಂಡಲೀಕಾಜೀ, ರಾಮಚಂದ್ರ ವಡವಿ ಮತ್ತು ಕಾತೇಗಡೆ ಇವರುಗಳು ಈ ಖಾದಿ ವಿದ್ಯಾಲಯದಲ್ಲಿ ತರಬೇತಿಯನ್ನು ನೀಡುತ್ತಿದ್ದರು, ಮುಂದೆ 1944ರಲ್ಲಿ ಪುಂಡಲೀಕಾಜಿಯವರ ಅಧ್ಯಕ್ಷತೆ ಮತ್ತು ಸೋಮಲಿಂಗಪ್ಪ ಅಪ್ಪಣ್ಣ ಮಳಗಲಿ ಅವರ ವ್ಯವಸ್ಥಾಪಕತ್ವದಲ್ಲಿ 'ಸಮಗ್ರ ಗ್ರಾಮ ಸೇವಾ ಸಮಿತಿ' ಅಸ್ತಿತ್ವಕ್ಕೆ ಬಂದಿತು. ಈ ಸಮಿತಿಯು ಖಾದಿ ಉತ್ಪಾದನೆ ಅಷ್ಟೇ ಅಲ್ಲದೆ ಗೋಸಂರಕ್ಷಣೆ, ಅಸ್ಪೃಶ್ಯತಾ ನಿವಾರಣೆ, ಪಾನ ನಿರೋಧ, ಶಿಕ್ಷಣ, ಮತ್ತು ಗ್ರಾಮಸ್ವರಾಜ್ಯ ಮುಂತಾದ ಇತರೆ ರಚನಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತು.

1942ರಲ್ಲಿ ಗಾಂಧೀಜಿಯವರ ಬಂಧನವಾಗಿ ನಂತರ ಬಿಡುಗಡೆಯಾದ ಮೇಲೆ ಆಶ್ರಮಗಳನ್ನು ವಿಕೇಂದ್ರೀಕರಿಸುವಂತಹ ಕಾರ್ಯವನ್ನು ನಡೆಸಿದರು. ಆಗ ಹುದಲಿ ಆಶ್ರಮವೂ ಸಹ ಆ ವ್ಯವಸ್ಥೆಗೆ ಒಳಪಟ್ಟಿತು. ಹುದಲಿಯು ಸಮಗ್ರ ಬೆಳಗಾವಿ ಜಿಲ್ಲಾ ಗ್ರಾಮೋದ್ಯೋಗ ಕೇಂದ್ರ, ಸಾಲಹಳ್ಳಿ ಹುಲ್ಕುಂದ, ಬೈಲಹೊಂಗಲ ಇತ್ಯಾದಿ ಕೇಂದ್ರಗಳಾಗಿ ವಿಭಾಗವಾಯಿತು. ಗ್ರಾಮ ಸೇವಾ ಸಮಿತಿಯ ಏಕಮೇವ ಟ್ರಸ್ಟಿಗಳಿಂದ ಶ್ರೀ ಪುಂಡಲೀಕಾಜಿಯವರು ಅನಿವಾರ್ಯ ಕಾರಣಗಳಿಂದ ಖಾದಿ ಕೆಲಸವನ್ನು ಕ್ರಿ.ಶ. 1953ರಲ್ಲಿ ಸಂಪೂರ್ಣವಾಗಿ ನಿಲ್ಲಿಸಿದ ಮೇಲೆ ಹನ್ನೊಂದು ಜನ ಖಾದಿ ಪ್ರೇಮಿ ನಿಷ್ಠಾವಂತ ಕಾರ್ಯಕರ್ತರು[5] ಆಗಿನ ಪ್ರಧಾನಿ ಮಾನ್ಯ ನೆಹರೂಜಿಯವರ ಸಹಕಾರ ತತ್ವದ ಧೋರಣೆಯಂತೆ 1954ರಲ್ಲಿ 'ಖಾದಿ ಗ್ರಾಮೋದ್ಯೋಗ

ಸಹಕಾರ ನಿಯಮಿತ' ಎಂಬ ಸಂಘವು ಅಂದು ಐದುನೂರು ರೂಪಾಯಿಗಳ ಬಂಡವಾಳದಿಂದ ಸ್ಥಾಪನೆಯಾಗಿ ಪ್ರಸ್ತುತ ಎಂಟು ಕೋಟಿಗಳ ವ್ಯವಹಾರ ವಹಿವಾಟನ್ನು ನಡೆಸುತ್ತಿದೆ.

ಈ ಸಂಘವು ಇಂದಿಗೂ ಶ್ರಮಧಾನ, ಭೂಧಾನ, ಭಾವೈಕ್ಯ ನಿರ್ಮಾಣ, ಗ್ರಾಮೋದ್ಯೋಗ ವಸ್ತುಗಳ ನಿರ್ಮಾಣ, ಸಾಬೂನು ತಯಾರಿಕೆ, ಊದುಬತ್ತಿ ತಯಾರಿಕೆ, ಉಪ್ಪಿನಕಾಯಿ ಮತ್ತು ಚರ್ಮವನ್ನು ಹದಗೊಳಿಸಿ ಚಪ್ಪಲಿ ತಯಾರಿಸುವಂತಹ ಗ್ರಾಮೋದ್ಯೋಗ ವಸ್ತುಗಳನ್ನು ತಯಾರು ಮಾಡುವ ಬಗ್ಗೆ ತರಬೇತಿ ನೀಡುತ್ತಿದೆ. ಪ್ರಸ್ತುತ ಗಂಗಪ್ಪ ಮುದ್ದಪ್ಪ ಮಾಳಗಿಯವರು ಸಂಘದ ಅಧ್ಯಕ್ಷರಾಗಿದ್ದು, ಇಂದಿಗೂ ಸಹ ಯಶಸ್ವಿಯುತವಾಗಿ ಮುನ್ನಡೆಸುತ್ತಿದ್ದಾರೆ.

**ಬದನವಾಳು ಖಾದಿ ಕೇಂದ್ರ**

ಗಾಂಧೀಜಿಯವರು ಕರ್ನಾಟಕದಲ್ಲಿ ಪ್ರವಾಸ ಕೈಗೊಂಡಿದ್ದರು. ಅವರ ಪ್ರವಾಸದ ನೆನಪುಗಳನ್ನು ಉಳಿಸಿಕೊಂಡಿರುವ ಹಲವು ಸ್ಥಳಗಳಿವೆ. ಅವುಗಳಲ್ಲಿ ನಂಜನಗೂಡು ತಾಲ್ಲೂಕಿನ ಬದನವಾಳು ಖಾದಿ ಕೇಂದ್ರವೂ ಒಂದಾಗಿದೆ. ಗ್ರಾಮ ಸ್ವರಾಜ್ಯ ಹಾಗೂ ವಿಧಾಯಕ ಕಾರ್ಯಕ್ರಮಗಳ ಮೂಲಕ ಜನರನ್ನು ಸ್ವಾತಂತ್ರ್ಯ ಚಳುವಳಿಗೆ ಸಜ್ಜುಗೊಳಿಸುವುದು ಅವರ ಪ್ರವಾಸದ ಆಶಯವಾಗಿತ್ತು. ಅದಕ್ಕೆ ಪೂರಕವಾಗಿ ಗ್ರಾಮೀಣ ಜನರಿಗೆ ಸ್ವದೇಶಿ ವಸ್ತುಗಳ ತಯಾರಿಕೆ ಮತ್ತು ಬಳಕೆಯನ್ನು ಕಲಿಸಿಕೊಡುವುದು ಅವರ ಮತ್ತೊಂದು ಉದ್ದೇಶವಾಗಿತ್ತು. ಖಾದಿ ಮತ್ತು ಗ್ರಾಮೋದ್ಯೋಗಗಳ ಮೂಲಕ ಗ್ರಾಮಗಳ ಉದ್ಧಾರ ಗಾಂಧೀಜಿಯವರ ಕನಸಾಗಿತ್ತು. ಇವರ ಈ ಕನಸ್ಸನ್ನು ನನಸಾಗಿಸುವ ಪ್ರಯತ್ನಗಳು ಕರ್ನಾಟಕ ಭಾಗದಲ್ಲಿ ನೆಡೆದವು.

1927ರಲ್ಲಿ ಗಾಂಧೀಜಿ ಮೈಸೂರಿಗೆ ಆಗಮಿಸಿದ್ದರು. ಆಗ ಅವರು ನಂಜನಗೂಡು ತಾಲ್ಲೂಕಿನ ಬದನವಾಳು ಗ್ರಾಮಕ್ಕೂ ಭೇಟಿ ನೀಡಿದ್ದರು. ಬದನವಾಳು ಹಾಗೂ ಸುತ್ತಮುತ್ತಲಿನ ಗ್ರಾಮಗಳು ನೂಲುವ ವೃತ್ತಿಯ ಪುನರುಜ್ಜೀವನಕ್ಕೆ ಯತ್ನಿಸಿದವು. ಅವರ ಭೇಟಿ ಬಳಿಕ ಬದನವಾಳು ಸುತ್ತಮುತ್ತಲಿನ ಅರವತ್ತು ಊರುಗಳಲ್ಲಿ 'ಚರಕ ಸಂಸ್ಕೃತಿ' ನೆಲೆಯೂರಿತು. ವ್ಯವಸ್ಥಾಪಕರನ್ನಾಗಿ ಎಸ್.ವಿ. ರಾಜಾರಾಂ ಅಯ್ಯಂಗಾರ್‌ರವರನ್ನು ನೇಮಿಸಲಾಯಿತು. ಖಾದಿ ಬಟ್ಟೆ ತಯಾರಿಸುವ ಕೇಂದ್ರ ಆರಂಭವಾಯಿತು. 1936ರಲ್ಲಿ ಗಾಂಧೀಜಿ ಮತ್ತೊಮ್ಮೆ ಬದನವಾಳಕ್ಕೆ ಭೇಟಿ ನೀಡಿ ಚರಕಸಂಘ ಸ್ಥಾಪಿಸಿ ಖಾದಿ ಕೇಂದ್ರಕ್ಕೆ ಶಾಶ್ವತ ನೆಲೆ ಕಲ್ಪಿಸಲು ನೆರವಾದರು. ಗಾಂಧೀಜಿಯವರು ಬರುವುದಕ್ಕೂ ಮೊದಲೇ ಇಲ್ಲಿ ಕೈ ನೂಲುವ ಉದ್ಯಮ ಆರಂಭವಾಗಿತ್ತು. ಬದನವಾಳು ಸುತ್ತಮುತ್ತಲಿನ ಸಾವಿರಾರು ಕುಟುಂಬಗಳ ಜೀವನೋಪಾಯಕ್ಕೆ ಅದೇ ಮೂಲವಾಗಿತ್ತು[6]. ಈ ಮೊದಲು ವಿದೇಶಿ ಬಟ್ಟೆಗಳು ದೇಶದೊಳಕ್ಕೆ ಬಂದ ನಂತರ ಕೈಯಿಂದ ನೂಲು ತೆಗೆಯುವಂತಹ ಬಟ್ಟೆ ತಯಾರಿಸುವ ದೇಶಿ ಉದ್ಯಮ ಮೂಲೆಗುಂಪಾಯಿತು, ನೇಕಾರರು ಗಿರಣಿಗಳತ್ತ ಗಮನಹರಿಸಿದರು.

ಈ ಗ್ರಾಮದ ಜನರ ಆದಾಯದ ಮೂಲವಾಗಿದ್ದ ನೂಲುವ ವೃತ್ತಿಗೆ ತೊಂದರೆ ಉಂಟಾಗಿ ರಾಟೆಗಳು ಮನೆಯ ಅಟ್ಟವನ್ನು ಸೇರಿದ್ದವು. ಆದರೆ 1927ರಲ್ಲಿ ಗಾಂಧೀಜಿಯವರು ಈ ಕೇಂದ್ರಕ್ಕೆ ಭೇಟಿ ನೀಡಿದ

ನಂತರ ಅಂದಿನ ಮೈಸೂರು ಸರ್ಕಾರ ಬದನವಾಳು ಗ್ರಾಮದತ್ತ ಗಮನ ಹರಿಸಿತು. ಹಾಗೆಯೇ ಅಖಿಲ ಭಾರತ ಖಾದಿ ಚರಕ ಸಂಘದವರು ನೂಲುವುದನ್ನು ಆರಂಭಿಸುವಂತೆ ಗ್ರಾಮಸ್ಥರನ್ನು ಪ್ರೇರೇಪಿಸಿದರು. ಖಾದಿ ಚರಕ ಸಂಘದವರನ್ನು ಬದನವಾಳು ಗ್ರಾಮಸ್ಥರು, ನೂಲು ಖರೀದಿ ಮಾಡುವ ಭರವಸೆ ಕೊಟ್ಟರೆ ಮತ್ತೆ ಚರಕ ತಿರುಗಿಸುತ್ತೇವೆ ಎಂಬುದಾಗಿ ಕೇಳಿಕೊಂಡರು. ಇದಕ್ಕೆ ಚರಕ ಸಂಘದವರು ಪೂರಕವಾಗಿ ಪ್ರತಿಕ್ರಿಯಿಸುವುದರ ಮೂಲಕ ಖಾದಿ ಕೇಂದ್ರ ಸ್ಥಾಪಿಸಿದರು. ಈ ಕೇಂದ್ರ ಆರಂಭವಾದ ಮೂರು ತಿಂಗಳಲ್ಲಿ ಏಳು ನೂರು ನಲವತ್ತು ಪೌಂಡು ನೂಲು ಸಿದ್ಧವಾಯಿತು. ರಾಟೆಗಳ ಸಂಖ್ಯೆ ಸಾವಿರಕ್ಕೆ ಏರಿತು. ಆಗಸ್ಟ್ 1928ರ ವೇಳೆಗೆ ಹತ್ತು ತಿಂಗಳಲ್ಲಿ ಏಳು ಸಾವಿರದ ಏಳುನೂರು ನಲವತ್ತು ನಾಲ್ಕು ಪೌಂಡ್ ನೂಲು ಉತ್ಪಾದನೆಯಾಯಿತು.

ಈ ಗ್ರಾಮದ ಜನರು ನೂತ ನೂಲನ್ನು ಬಳಸಿಕೊಂಡು ಬಟ್ಟೆ ನೇಯುವುದಕ್ಕೂ ಕೇಂದ್ರ ವ್ಯವಸ್ಥೆ ಮಾಡಿತು. ಆರಂಭದಲ್ಲಿ ಟವೆಲ್ಗಳನ್ನು ತಯಾರಿಸುತ್ತಿದ್ದರು. ತೆಳುವಾದ ನೂಲು ಸಿದ್ಧವಾದ ನಂತರ ವಿವಿಧ ಉಡುಪು ತಯಾರಿಕೆ ಉತ್ಪಾದನೆ ಆರಂಭವಾಯಿತು[7]. ಪ್ರಾರಂಭದಲ್ಲಿ ಒಟ್ಟು ಅರವತ್ತೆರಡು ಕೈ ಮಗ್ಗಗಳು ಕಾರ್ಯಪ್ರವೃತ್ತವಾದವು. ಆ ವರ್ಷ ಮೂರು ಸಾವಿರದ ಏಳು ನೂರ ನಲವತ್ತೊಂದು ರೂಪಾಯಿ ಬೆಲೆಯ ಖಾದಿ ಉತ್ಪನ್ನಗಳು ತಯಾರಾದವು. 1928ರ ಜೂನ್ ಅಂತ್ಯಕ್ಕೆ ಮೂರು ಸಾವಿರದ ಮೂನ್ನೂರಏಪ್ಪತ್ತೇರಡು ರೂಪಾಯಿಗಳ ಮೊತ್ತದ ಖಾದಿ ಉತ್ಪನ್ನಗಳು ಮಾರಾಟವಾದವು.

ಮುಂದಿನ ಹತ್ತು ವರ್ಷಗಳಲ್ಲಿ ಚರಕ ಸಂಘ ಬದನವಾಳು ಕೇಂದ್ರವನ್ನು ಬಲಗೊಳಿಸಿತು. ಪ್ರಾರಂಭದಲ್ಲಿ ಅರವತ್ತು ಜನ ನೂಲುವವರಿದ್ದರು. ಒಂಭತ್ತು ಜನ ನೇಕಾರರಿದ್ದರು. ಮೂರು ಸಾವಿರದ ಐದುನೂರು ರೂಗಳ ಬಂಡವಾಳವಿತ್ತು ಮುಂದಿನ 1933–34ರ ವರ್ಷಗಳಲ್ಲಿ ಸುಮಾರು ಎರಡು ಸಾವಿರ ನೂಲುವವರು, ನೂರನಲವತ್ತು ನೇಕಾರರು ಖಾದಿ ಕೆಲಸಕ್ಕೆ ಸಿದ್ದರಾದರು. ಬದನವಾಳು ಸುತ್ತಮುತ್ತಲಿನ ಆರವತ್ತು ಹಳ್ಳಿಗಳಲ್ಲಿ ಖಾದಿ ಕಂಪು ಪ್ರಸರಿಸಿತು. ನೇಯ್ದೆ ಕೆಲಸಕ್ಕೆ ಅನುಕೂಲವಾಗಲೆಂದು ನಂಜನಗೂಡಿನಲ್ಲಿ ಬಣ್ಣ ಹಾಕುವ ಘಟಕ ಆರಂಭವಾಯಿತು. ದುಶ್ಚಟಗಳನ್ನು ತಗ್ಗಿಸಿ, ಗಳಿಕೆಯ ಸ್ವಲ್ಪ ಭಾಗವನ್ನು ಉಳಿತಾಯ ಮಾಡಿ ಅದನ್ನು ಕಾಯ್ದುಕೊಳ್ಳಿ ಎಂದು ಗಾಂಧೀಜಿ ನೀಡಿದ ಕರೆಯನ್ನು ಬದನವಾಳಿನ ನೂಲುವವರು ಮತ್ತು ನೇಕಾರರು ಅಕ್ಷರಶಃ ಪಾಲಿಸಿದರು. ಮೈಸೂರು ಸಂಸ್ಥಾನದ ಸರ್ಕಾರ ನೂಲುವುದಕ್ಕೆ ನೀಡಿದ್ದ ಪ್ರೋತ್ಸಾಹವನ್ನು ಕುರಿತು ಗಾಂಧೀಜಿ ತಮ್ಮ ಯಂಗ್ ಇಂಡಿಯಾ (1928ರ ನವೆಂಬರ್ 20 ರ ಸಂಚಿಕೆ) ಪತ್ರಿಕೆಯಲ್ಲಿ ಮೈಸೂರು ಸರ್ಕಾರ ಕಡು ಬಡ ಜನರನ್ನು ಆರ್ಥಿಕವಾಗಿ ಮೇಲೆತ್ತಲು ತೋರುತ್ತಿರುವ ಉತ್ಸಾಹಕ್ಕೆ ಅಭಿನಂದಿಸುತ್ತಾ ಒಂದು ಮಾತನ್ನು ಹೇಳಲು ಬಯಸುತ್ತೇನೆ. ಮೈಸೂರಿನ ಶ್ರೀಯುತರು ಮತ್ತು ಅಧಿಕಾರಿಗಳು ಖಾದಿಬಟ್ಟೆ ಬಳಸದಿದ್ದರೆ, ಮೈಸೂರು ನಗರದ ಮನೆಗಳಲ್ಲಿ ಖಾದಿ ಶಾಶ್ವತವಾಗಿ ನೆಲೆಸಲಾರದು, ತಾವು ಬಯಸಿದಷ್ಟು ಖಾದಿ ಪಡೆಯಲು ಸಾಧ್ಯ ಎಂದು ಅವರು ಈಗ ತಿಳಿದುಕೊಂಡಿದ್ದಾರೆ, ಆದರೆ ಉತ್ತಮವರ್ಗದವರು ಎಂದು ಹೇಳಿಕೊಳ್ಳುವವರು ನುಡಿದಂತೆ ನಡೆಯುವವರಲ್ಲವೆಂದು ಸರಳ ಹಳ್ಳಿಗರು ಬಲ್ಲರು. ಅವರನ್ನು ಗೊಂದಲಕ್ಕೆ ಗುರಿಪಡಿಸಬೇಡಿ ಎಂದು ಲೇಖನದಲ್ಲಿ ಪ್ರಕಟಿಸಿದರು. ಈ ಲೇಖನವು ಗ್ರಾಮಸ್ಥರಿಗೆ ಮತ್ತಷ್ಟು ಉರುಪು ತುಂಬಿತು.

ಗಾಂಧೀಜಿಯವರಿಂದ ಖಾದಿ ದೀಕ್ಷೆ ಪಡೆದ ಮೇಲೆ ಬದನವಾಳನಲ್ಲಿ ಸಾಕಷ್ಟು ಬದಲಾವಣೆಗಳಾದವು. ಈಗಿನ ಖಾದಿ ತರಬೇತಿ ಕೇಂದ್ರಕ್ಕೂ ಹಿಂದಿನ ಕೇಂದ್ರಕ್ಕೂ ಭಾರೀ ವ್ಯತ್ಯಾಸವಿದೆ. ಪ್ರಸ್ತುತ ಖಾದಿ ಕೇಂದ್ರವು ನಶಿಸುವ ಸ್ಥಿತಿಯಲ್ಲಿದೆ. ಏಳು ಎಕರೆ ಪ್ರದೇಶದಲ್ಲಿರುವ ಕೇಂದ್ರದ ಬಹುತೇಕ ಕಟ್ಟಡಗಳು ಈಗ ಸ್ಮಾರಕಗಳಂತಾಗಿವೆ. ಕೈ ಮಗ್ಗಗಳೇ ಅಲ್ಲದೆ ಹಲವು ಉಪಕಸುಬುಗಳು ಇಲ್ಲಿ ನೆಲೆಗೊಂಡಿದ್ದವು. ಗಾಣದಿಂದ ಎಣ್ಣೆಯನ್ನು ತೆಗೆಯುವುದು, ಬೆಂಕಿಪೊಟ್ಟಣ ತಯಾರಿಕೆ, ಬಡಗಿ ಕೆಲಸ, ರೇಷ್ಮೆಹುಳು ಸಾಕಾಣಿಕೆ ಇತ್ಯಾದಿ ಕೆಲಸಗಳು ಇಲ್ಲಿ ನಡೆಯುತ್ತಿದ್ದವು. ಪ್ರಸ್ತುತ ಸಮಯದಲ್ಲಿ ಈ ಎಲ್ಲಾ ಕೆಲಸಗಳು ಸ್ಥಗಿತಗೊಂಡಿವೆ. ಎಣ್ಣೆಗಾಣಗಳು ಮೂಲೆ ಸೇರಿದೆ. ಮರಗೆಲಸದ ಸಾಮಗ್ರಿಗಳು ತುಕ್ಕು ಹಿಡಿದಿವೆ. ಬೆಂಕಿ ಪೊಟ್ಟಣದ ಘಟಕದ ಕಟ್ಟಡ ಶಿಥಿಲವಾಗಿದೆ. ಇಲ್ಲಿನ ಕಟ್ಟಡಗಳಿಗೆ ರಕ್ಷಣೆ ಇಲ್ಲ. ಅಲ್ಪ ಸ್ವಲ್ಪ ದುರಸ್ತಿ ಕಂಡಿರುವ ಒಂದೆರಡು ಕಟ್ಟಡಗಳಲ್ಲಿ ನೂಲುವ ನೇಯುವ ಕೆಲಸ ನಡೆಯುತ್ತಿದೆ. ಇಂದು ಈ ರೀತಿಯ ಸ್ಥಿತಿಯನ್ನು ಬಹಳಷ್ಟು ಖಾದಿ ಕೇಂದ್ರಗಳು ಎದುರಿಸುತ್ತಿವೆ.

**ಅಜ್ಜಂಪುರ ಖಾದಿ ಕೇಂದ್ರ – 1928**

1928ರಲ್ಲಿ ಚಿಕ್ಕಮಂಗಳೂರು ಜಿಲ್ಲೆಯ ಕಾಂಗ್ರೆಸ್ ಬೋರ್ಡಿನ ಆಶ್ರಯದಲ್ಲಿ ಎಸ್. ಸುಬ್ರಮಣ್ಯ ಶೆಟ್ಟಿಯವರ ಬೆಂಬಲದಿಂದ ಹೊಸಕೊಪ್ಪ ಕೃಷ್ಣರಾಯರು ಮತ್ತು ಬಿರೂರಿನ ಕೆ.ಟಿ.ಸತ್ಯನಾರಾಯಣ ಶೆಟ್ಟಿಯವರು ಅಜ್ಜಂಪುರದಲ್ಲಿ ಖಾದಿ ಉತ್ಪಾದನಾ ಕೇಂದ್ರವನ್ನು ಸ್ಥಾಪಿಸಿದರು[8]. ಡಾ. ಪಿ.ಸಿ. ರಾಯ್ರವರು ಈ ಖಾದಿಕೇಂದ್ರವನ್ನು ಉದ್ಘಾಟಿಸಿದರು. ಎಚ್. ನಾರಾಯಣರಾವ್, ಎಸ್. ಹನುಮಯ್ಯ, ಬಿ.ಪಿ. ಸುಬ್ಬರಾವ್, ಎ.ಪಿ. ನಾಗರಾಜ ಶ್ರೇಷ್ಠಿ ಇನ್ನೂ ಮುಂತಾದವರು ಈ ಖಾದಿ ಉತ್ಪಾದನಾ ಕೇಂದ್ರದಲ್ಲಿ ಕಾರ್ಯನಿರ್ವಹಿಸಿದರು. ಜೊತೆಗೆ ಇವರುಗಳೆಲ್ಲರೂ ಈ ಭಾಗದಲ್ಲಿ ಖಾದಿ ಪ್ರಚಾರ ಕಾರ್ಯವನ್ನು ನಡೆಸಿದರು. ಹೀಗೆ ಅಂದು ಖಾದಿ ಪ್ರಚಾರಕ್ಕೆ ರಚನಾತ್ಮಕ ಕಾರ್ಯಕರ್ತರುಗಳು ನಡೆಸಿದ ಪ್ರಯತ್ನದಿಂದ ಪ್ರಸ್ತುತದಲ್ಲಿ ಈ ಪ್ರದೇಶದಲ್ಲಿ ಬಹುತೇಕ ಜನರು ಖಾದಿಧಾರಿಗಳಾಗಿರುವುದನ್ನು ನಾವು ಕಾಣುತ್ತೇವೆ.

**ಕೊನೆ ಟಿಪ್ಪಣಿಗಳು**

---

1. 03–11–1947. –ಗಂಗಾಧರ ರಾಯರ – ಹುದಲಿ, ರಾಜಗೋಪಾಲಚಾರಿಯವರು– ತಿರುಚನಗೂಡು, ಕಾಸಿಯಲ್ಲಿ ಕೃಪಾಲಾನಿಯವರ ಸೇವಾಪುರಿ, ರಾಜೇಂದ್ರ ಪ್ರಸಾದ್ರವರ ಪಾಟ್ನದ ಆಶ್ರಯಗಳು.
2. ಕ್ಷೇತ್ರಕಾರ್ಯ – ಹುದಲಿ, ಖಾದಿ ಗ್ರಾಮೋದ್ಯೋಗ ಕೇಂದ್ರ, ಹುದಲಿ, ಬೆಳಗಾವಿ ಜಿಲ್ಲೆ, ದಿನಾಂಕ 13–12–2011.
3. "ಸಂದರ್ಶನ : "ಗಂಗಪ್ಪ ಮುದ್ದಪ್ಪ ಮಾಳಗಿ : ಖಾದಿಕಿರಣ, ಖಾದಿ ಮತ್ತು ಗ್ರಾಮೋದ್ಯೋಗ ಸಹಕಾರಿ ಸಂಘ (ರಿ), ಹುದಲಿ, 1998, ಪುಟ 58.
4. ಹುದಲಿಯ ಸೋಮಲಿಂಗ ಅಪ್ಪಣ್ಣಮಳಗಲಿ, ನಿಂಗಪ್ಪ ಯಲ್ಲಪ್ಪ ತುಕ್ಕಾರ, ಭೀಮಪ್ಪ ನಿಂಗಪ್ಪ ಭೋಶಿ, ಭೀ.ಚ.ಯಲಿಗಾರ, ಕೆಂಚನಗೌಡ ಪಾಟೀಲ್, ಅ.ಶಿ. ವಾರೀಮನಿ, ಅಕ್ಕತಂಗಿಯರ

ಹುಚ್ಚಪ್ಪ ಹೊಳೆಯಾಚೆ, ನೀಲಕಂಠಯ ಗಣಾಚಾರಿ, ಪಿ.ಬಿ.ಪಾಟೀಲ್, ನಾರಾಯಣ ದೀಕ್ಷಿತ್ ಮುಂತಾದವರು. ಪುಟ.ಸಂ 59.

5. ಶ್ರೀ ಕಾ.ಮ. ತೋಟಗಿ, ಗಂಗಪ್ಪ ಮುದ್ದಪ್ಪ ಮೊಳಗಿ, ಭೀಮಪ್ಪ ನಿಂಗಪ್ಪ ಭೂಶಿ ನಿಂಗಪ್ಪ ಯಲಪ್ಪ ತುಕ್ಕಾರ, ಗೌಡಪ್ಪ ಚನ್ನಪ್ಪ ಪಾಟೀಲ, ವಾ.ನಾ. ಕದಮ, ಸೋಮಲಿಂಗ ಅಪ್ಪಣ್ಣ ಮಳಗಲಿ, ರಾ.ಬ. ಬಡಿಗೇರ, ಬ.ಸಿ. ಯಮಕನಮರ್ಡಿ, ಮಾ.ಲ. ಮಾಳಗಿ, ಮಾ. ಬ. ಮಜ್ಜಿಗಿ,
6. ಸಂದರ್ಶನ : ಮಹಾದೇವ ವ್ಯವಸ್ಥಾಪಕರು ಬದನವಾಳ ಖಾದಿ ಕೇಂದ್ರ ದಿನಾಂಕ 29–11–2012, ಬದನವಾಳ, ನಂಜನಗೂಡು ತಾಲ್ಲೂಕು.
7. ಕ್ಷೇತ್ರಕಾರ್ಯ : ಬದನವಾಳು ಖಾದಿಕೇಂದ್ರ, ನಂಜನಗೂಡು ತಾಲ್ಲೂಕು, ದಿನಾಂಕ : 29–11–2012.
8. ಸಂದರ್ಶನ : ಸೋಮನಹಟ್ಟಿ, ನಿವೃತ ಕಾರ್ಯದರ್ಶಿಗಳು, ಬೆಂಗೇರಿ, ದಿನಾಂಕ : 9–12–2011.

**ಪರಾಮರ್ಶನ ಗ್ರಂಥಗಳು**


- ಅಗರ್‌ವಾಲ. (1938). *ಖಾದಿ ಮತ್ತು ಗ್ರಾಮ ಕೈಗಾರಿಕೆಗಳು.* ಬೆಂಗಳೂರು.
- ಕಮಲಾ ಸಂಪಳ್ಳಿ. (1992). *ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಮ್ಮ ವೀರವನಿತೆಯರು.* ಬೆಂಗಳೂರು.
- ಕರಿಮಣಿ ಎಸ್. ಯು. (1979). *ಹುತಾತ್ಮ ಮೈಲಾರ ಮಹದೇವಪ್ಪ.* ವೀರಶೈವ ಅಧ್ಯಯನ ಸಂಸ್ಥೆ.
- ಕೃಷ್ಣಪ್ಪ ಮಡಿವಾಳ. (2010). ಗಾಂಧೀಜಿ ಅರ್ಥಶಾಸ್ತ್ರ, ಈಶ್ವರಿ ಪ್ರಕಾಶನ, ದಕ್ಷಣ ಕನ್ನಡ.
- ಕೃಷ್ಣಪ್ಪ, ಸಿ. (2006). *ಖಾದಿ ಗಂಗಪ್ಪನವರು.* ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ.